ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆ
1951ರ ರಾಜ್ಯ ಹಣಕಾಸು ಸಂಸ್ಥೆಗಳ ಕಾಯಿದೆ ಅನ್ವಯ ಸ್ಥಾಪಿತ
KARNATAKA STATE FINANCIAL CORPORATION
Established under the State Financial Corporations' Act, 1951

ಸಂಖ್ಯೆ : ಕ.ರಾ.ಹ.ಸಂ./ಪ್ರ.ಕ./ 2-71/20-21
Ref. No. KSFC/H.O./

ದಿನಾಂಕ : 
Date 05/05/2020

**ಸುತ್ತೋಲೆ – 29**

ವಿಷಯ: ಕೊರೋನಾ ವೈರಸ್(ಕೋವಿಡ್-19) ತಡೆಗಟ್ಟುವ ಹಿನ್ನಲೆಯಲ್ಲಿ ಕರ್ನಾಟಕ ಸರ್ಕಾರ ಆದೇಶ ಸಂಖ್ಯೆ.ಸಿಆಸುಇ 123 ಡಿಜಿಎಂ 2020(ಭಾಗ) ದಿನಾಂಕ 02.05.2020 ಸಂಸ್ಥೆಯ ಉದ್ಯೋಗಿಗಳು ಕೆಲಸಕ್ಕೆ ಹಾಜರಾಗುವ ಬಗ್ಗೆ.

ಉಲ್ಲೇಖ:1. ಸಂಸ್ಥೆಯ ಸುತ್ತೋಲೆ ಸಂಖ್ಯೆ 23 ದಿನಾಂಕ 24.03.2020
2. ಸಂಸ್ಥೆಯ ಸುತ್ತೋಲೆ ಸಂಖ್ಯೆ 24 ದಿನಾಂಕ 01.04.2020
3. ಸಂಸ್ಥೆಯ ಸುತ್ತೋಲೆ ಸಂಖ್ಯೆ.25 ದಿನಾಂಕ 20.04.2020.

---

ಕರ್ನಾಟಕ ರಾಜ್ಯದಲ್ಲಿ ಕೊರೋನಾ ವೈರಸ್(ಕೋವಿಡ್-19) ಸಂಕ್ರಾಮಿಕವಾಗಿ ಹರಡುತ್ತಿರುವ ಹಿನ್ನಲೆಯಲ್ಲಿ ಸಚಿವಾಲಯವು ಸೇರಿದಂತೆ ರಾಜ್ಯ ಮಟ್ಟದ ಕಛೇರಿಗಳಲ್ಲಿ ಅಧಿಕಾರಿ ಹಾಗೂ ನೌಕರರು ಕಛೇರಿ ಕೆಲಸಕ್ಕೆ ಹಾಜರಾಗುವ ಸಂಬಂಧ ಕರ್ನಾಟಕ ರಾಜ್ಯ ಸರ್ಕಾರ ದಿನಾಂಕ 02.05.2020ರ ಸುತ್ತೋಲೆಯನ್ವಯ ಆರೋಗ್ಯ ಇಲಾಖೆಯು ಕಾಲಕಾಲಕ್ಕೆ **ಕೆಂಪು, ಹಸಿರು** ಮತ್ತು **ಕಿತ್ತಲೆ** ವಲಯಗಳನ್ನಾಗಿ ವಿಂಗಡಿಸಿ ಅಧಿಸೂಚಿರುತ್ತದೆ.

ಈ ವಿಂಗಡಣೆಯಂತೆ ದಿನಾಂಕ 04.05.2020 ರಿಂದ ದಿನಾಂಕ 17.05.2020ರವರಗಿನ ಅವಧಿಯಲ್ಲಿ ಕೆಂಪು ವಲಯದಲ್ಲಿ ಬರುವ ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ ಮತ್ತು ಮೈಸೂರು ಜಿಲ್ಲೆಗಳಲ್ಲಿ ಅತ್ಯಗತ್ಯ ಸೇವೆಯನ್ನು ಒದಗಿಸುತ್ತಿರುವ ಸರ್ಕಾರಿ ಕಛೇರಿಗಳಲ್ಲಿ ಶೇ.100 ರಷ್ಟು ಗ್ರೂಪ್ ಎ, ಗ್ರೂಪ್ ಬಿ, ಗ್ರೂಪ್ ಸಿ ಮತ್ತು ಗ್ರೂಪ್ ಡಿ ವೃಂದದ ಎಲ್ಲಾ ಅಧಿಕಾರಿಗಳು / ಸಿಬ್ಬಂದಿಗಳು ಕರ್ತವ್ಯಕ್ಕೆ ಹಾಜರಾಗತಕ್ಕದ್ದು ಎಂದು ಮತ್ತು ಉಳಿದ ಇಲಾಖೆಯಲ್ಲಿನ ಗ್ರೂಪ್ ಎ ಮತ್ತು ಬಿ ವೃಂದದ ಎಲ್ಲಾ ಅಧಿಕಾರಿಗಳು ಮತ್ತು ಗ್ರೂಪ್ ಸಿ ಮತ್ತು ಡಿ ವೃಂದದ **ಶೇ.33%** ರಷ್ಟು ಸಿಬ್ಬಂದಿಗಳು ಕರ್ತವ್ಯಕ್ಕೆ ಹಾಜರಾಗಬೇಕೆಂದು ಸದರಿ ಸುತ್ತೋಲೆಯಲ್ಲಿ ತಿಳಿಸಲಾಗಿದೆ. ಇದಲ್ಲದೆ ದಿನಾಂಕ 04.05.2020ರಿಂದ ಜಾರಿಗೆ ಬರುವಂತೆ **ಕಿತ್ತಲೆ** ಮತ್ತು **ಹಸಿರು** ವಲಯಗಳಲ್ಲಿ ಬರುವ ಉಳಿದ ಎಲ್ಲಾ ಜಿಲ್ಲೆಗಳ ಸರ್ಕಾರಿ ಕಛೇರಿಗಳಲ್ಲಿ ಶೇ.100 ರಷ್ಟು ಎಲ್ಲಾ ವೃಂದದ ಅಧಿಕಾರಿ ಸಿಬ್ಬಂದಿಗಳು ಕರ್ತವ್ಯಕ್ಕೆ ಹಾಜರಾಗಬೇಕೆಂದು ತಿಳಿಸಿರುತ್ತಾರೆ.

ಸಂಸ್ಥೆಯಲ್ಲಿಯೂ ಸಹ ದಿನಾಂಕ 04.05.2020 ರಿಂದ ದಿನಾಂಕ 17.05.2020 ರವರೆಗಿನ ಅವಧಿಯಲ್ಲಿ ಕೆಂಪು ವಲಯದಲ್ಲಿ ಬರುವ ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ ಮತ್ತು ಮೈಸೂರು ಜಿಲ್ಲೆಗಳಲ್ಲಿ ಸಂಸ್ಥೆಯ ಶಾಖೆಗಳಲ್ಲಿ ಗ್ರೂಪ್ ಎ ಮತ್ತು ಬಿ ವೃಂದದ ಎಲ್ಲಾ ಉದ್ಯೋಗಿಗಳು ಹಾಗೂ ಗ್ರೂಪ್ ಸಿ ವೃಂದದಲ್ಲಿ **ಶೇ.33 ರಷ್ಟು** ಸಿಬ್ಬಂದಿಗಳು ಕರ್ತವ್ಯಕ್ಕೆ ಹಾಜರಾಗತಕ್ಕದ್ದು.

ದಿನಾಂಕ 04.05.2020 ರಿಂದ ಜಾರಿಗೆ ಬರುವಂತೆ **ಕಿತ್ತಲೆ** ಮತ್ತು **ಹಸಿರು** ವಲಯಗಳಲ್ಲಿ ಬರುವ ಎಲ್ಲಾ ಶಾಖೆಗಳಲ್ಲಿ **ಶೇ.100 ರಷ್ಟು** ಎಲ್ಲಾ ವೃಂದದ ಉದ್ಯೋಗಿಗಳು ಕರ್ತವ್ಯಕ್ಕೆ ಹಾಜರಾಗಲು ಈ ಮೂಲಕ ತಿಳಿಸಲಾಗಿದೆ.

ಕಾರ್ಯನಿರ್ವಾಹಕ ನಿರ್ದೇಶಕರು-1
04/05/2020.

ಎಲ್ಲಾ ಶಾಖಾ ಕಛೇರಿಗಳು /ಆಲೆಪ ಕೋಶಗಳಿಗೆ
ಪ್ರಧಾನ ಕಛೇರಿಯ ಎಲ್ಲಾ ವಿಭಾಗಗಳ ಮುಖ್ಯಸ್ಥರುಗಳಿಗೆ
ಎಲ್ಲಾ ಪ್ರಧಾನ ವ್ಯವಸ್ಥಾಪಕರುಗಳಿಗೆ
ಕಾರ್ಯ ನಿರ್ವಾಹಕ ನಿರ್ದೇಶಕರು-2
ಗ್ರಂಥಾಲಯ / ಸೂಚನಾ ಫಲಕಕ್ಕೆ